ಡಿಡಬ್ಲ್ಯೂ: 02.

ದಿನಾಂಕ: 6-4-2018 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ 6 ರಿಂದ 11 ರ ಪರ ಶ್ರೀ: ಕೆ.ಸಿ.ಬಿ ವಕೀಲರಿಂದ:

ನನ್ನನ್ನು ಪಂಚವಳ್ಳಿಗೆ ಕೊಟ್ಟು ಮದುವೆ ಮಾಡಿದ್ದು ನಾನು ಅಲ್ಲಿ ವಾಸವಾಗಿದ್ದೇನೆ. ನನ್ನ ತಾಯಿ ತಿಪ್ಪಲಾಪುರ ಗ್ರಾಮದಲ್ಲಿ ವಾಸವಾಗಿದ್ದಾರೆ. ಮೂರ್ತಿಯವರ ತಾಯಿ ಹೆಸರು ದೊಡ್ಡಮ್ಮ. ದೊಡ್ಡಮ್ಮನವರು ಕೆ ಆರ್ ನಗರ ತಾಲ್ಲೂಕು ಮದುವನಹಳ್ಳಿ ಗ್ರಾಮದವರು. ಕಳೆದ 50 ವರ್ಷಗಳಿಂದ ದೊಡ್ಡಮ್ಮನವರು ಮದುವನಹಳ್ಳಿಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ದೊಡ್ಡಮ್ಮನವರ ಚುನಾವಣಾ ಗುರುತಿನ ಚೀಟಿ ಮತ್ತು ಪಡಿತರ ಚೀಟಿ ಮತ್ತು ಮತ ಚಲಾವಣೆ ಮದುವಿನಹಳ್ಳಿಯಲ್ಲಿಯೇ ಇದೆ ಎಂದರೆ ಸರಿ. ನಿಂಗಮ್ಮನವರು ನನಗೆ ದೊಡಪ್ಪನ ಹೆಂಡತಿ ಆಗಬೇಕು. ನಿಂಗಮ್ಮನವರ ಗಂಡನ ಹೆಸರು ರಾಮಯ್ಯ. ನಿಂಗಮ್ಮನವರಿಗೆ ಇಬ್ಬರು ಹೆಣ್ಣು ಮಕ್ಕಳು 3 ಜನ ಗಂಡು ಮಕ್ಕಳು. ನಿಡಿ-7 ರಲ್ಲಿ ಕಾಣುತ್ತಿರುವ ಭಾವಚಿತ್ರ ಯಾರದು ಎಂದರೆ ಸಾಕ್ಷಿಯು ಸಣ್ಣಸ್ವಾಮಿಯವರದು ಎಂದಿದ್ದಾರೆ. ಸದರಿ ಸಣ್ಣಸ್ವಾಮಿ ರಾಮಯ್ಯ ಮತ್ತು ನಿಂಗಮ್ಮನವರ ಮೊದಲನೇ ಮಗ. ನಿಡಿ-8 ರಲ್ಲಿ ಕಾಣುತ್ತಿರುವ ಭಾವಚಿತ್ರ ಯಾರದು ಎಂದರೆ ಸಾಕ್ಷಿಯು ನಾವು ಪಾಪ ಎಂದು ಕರೆಯುವ ವ್ಯಕ್ತಿ ಆತನಿಗೆ ರಾಮಕೃಷ್ಣ ಎಂದು ಕರೆಯುತ್ತಾರೆ. ಆತನ ಶಾಲಾ ದಾಖಲೆಗಳಲ್ಲಿ ಮತ್ತು ಸರ್ಕಾರಿ ದಾಖಲೆಗಳಲ್ಲಿ ರಾಮಕೃಷ್ಣ ಎಂದು ಇದ್ದು ನಾವು ಪ್ರೀತಿಯಿಂದ ಪಾಪ ಎಂದು ಕರೆಯುತ್ತೇವೆ ಎಂದಿದ್ದಾರೆ. ಸದರಿ ರಾಮಕೃಷ್ಣನು ರಾಮಯ್ಯ ಮತ್ತು ನಿಂಗಮ್ಮನವರ 2 ನೇ ಮಗ. ನಿಡಿ-9 ರಲ್ಲಿ ಕಾಣುತ್ತಿರುವ ಭಾವಚಿತ್ರ ಯಾರದು ಎಂದರೆ ಸಾಕ್ಷಿಯು ಬಸವರಾಜು ಯವರದು ಎಂದಿದ್ದಾರೆ. ಸದರಿ ಬಸವರಾಜು ರಾಮಯ್ಯ ಮತ್ತು ನಿಂಗಮ್ಮನವರ 3 ನೇ ಮಗ. ನಿಡಿ-10 ರಲ್ಲಿ ಕಾಣುವ ಭಾವ ಚಿತ್ರ ನಿಂಗಮ್ಮ ರಾಮಯ್ಯನ ಹೆಂಡತಿಯದಾಗಿರುತ್ತದೆ . ರಾಮಯ್ಯನವರಿಗೆ 2 ಜನ ಹೆಂಡತಿಯರು. ಮೊದಲನೇ ಹೆಂಡತಿ ದೊಡ್ಡಮ್ಮ , 2 ನೇ ಹೆಂಡತಿ ನಿಂಗಮ್ಮ. ದೊಡ್ಡಮ್ಮನಿಗೆ 3 ಜನ ಮಕ್ಕಳು. 2 ನೇ ಹೆಂಡತಿ ನಿಂಗಮ್ಮ ಜೀವಂತ ಇದ್ದಾರೆ . ಅವರಿಗೆ 5 ಜನ ಮಕ್ಕಳು. ಅವರ ಪೈಕಿ 3 ಜನ ಗಂಡು 2 ಜನ ಹೆಣ್ಣು ಮಕ್ಕಳು. ಅವರುಗಳೆಂದರೆ ಸಣ್ಣಸ್ವಾಮಿ , ಬಸವರಾಜು , ರಾಮಕೃಷ್ಣ , ಪುಟ್ಟಮ್ಮ ಮತ್ತು ಬಸಮ್ಮ. ಪುಟ್ಟಮ್ಮನಿದಿಗೆ ಸಣ್ಣಪುಟ್ಟಮ್ಮ ಎಂತಲೂ ಕರೆಯುತ್ತಾರೆ.

ದಾವ ಸ್ವತ್ತು ದೊಡ್ಡಮ್ಮನ ಮಕ್ಕಳಾದ ಮೂರ್ತಿ , ಧ್ರಾಕ್ಷಾಯಿಣಿ , ದೊಡ್ಡಮ್ಮ , ರಾಮಕೃಷ್ಣ , ಬಸವರಾಜು , ಪುಟ್ಟಮ್ಮ , ಸಣ್ಣಪುಟ್ಟಮ್ಮ ಮತ್ತು ನಿಂಗಮ್ಮ ಅವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಅವರೆಲ್ಲರು ಜಂಟಿಯಾಗಿ ವ್ಯವಸಾಯ ಮಾಡುತ್ತಿದ್ದಾರೆಂದರೆ ಸರಿ. ಸದರಿ ಜಮೀನಿಗೆ ಸಂಬಂದಪಟ್ಟಂತೆ ದೊಡ್ಡಮ್ಮ , ರಮೇಶ ಮತ್ತು ಮೂರ್ತಿ ಎಂಬುವವರು ನಿಂಗಮ್ಮನ ವಿರುದ್ದ ಎ.ಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಆಗಿದೆ ಎಂದರೆ ಸರಿ. ದಾವಾ ಆಸ್ತಿಯ ಮೇಲೆ ನಿಂಗಮ್ಮ ಮತ್ತು ಆಕೆಯ ಎಲ್ಲಾ ಮಕ್ಕಳಿಗೂ ಸಹ ಭಾಗಾಂಶದ ಹಕ್ಕು ಇರುತ್ತದೆ ಎಂದರೆ ಸರಿ. ನಮಗೂ ಮತ್ತು ರಾಮಯ್ಯನ ಮಕ್ಕಳು ನಿಂಗಮ್ಮ ಮತ್ತು ದೊಡ್ಡಮ್ಮನಿಗೂ ನೇರವಾದ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರೆಲ್ಲರು ನನ್ನ ತಾತನ ತಮ್ಮನ ಮಕ್ಕಳು ಎಂದಿದ್ದಾರೆ. ನನ್ನ ತಾತನ ಹೆಸರು ಮೂಗಯ್ಯ . ಮೂಗಯ್ಯನಿಗೆ ನನ್ನ ತಂದೆ ಒಬ್ಬರೇ ಮಗನಾಗಿರುತ್ತಾರೆ. ರಾಮಯ್ಯನ ತಂದೆ ಹೆಸರು ಹೆಳವಯ್ಯ. ಹೆಳವಯ್ಯನಿಗೆ 2 ಜನ ಮಕ್ಕಳು. ಅವರೆಂದರೆ, ಬಸವಯ್ಯ ಮತ್ತು ರಾಮಯ್ಯ. ದಾವ ಸ್ವತ್ತು ಹೆಳವಯ್ಯನ ಆಸ್ತಿಗಳು ಎಂದರೆ ಸರಿಯಲ್ಲ. ದೊಡ್ಡಮ್ಮನ ಗಂಡನ ತಂದೆ ಹೆಸರು ಹೆಳವಯ್ಯ. ದಾವ ಸ್ವತ್ತುಗಳು ಹೆಳವಯ್ಯನ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವ ಸ್ವತ್ತು ಹೆಬ್ಬೂರ ಬಿನ್ ಕೆಂಚ ಎಂಬುವವರ ಆಸ್ತಿ ಎಂದಿದ್ದಾರೆ. ಹೆಳವಯ್ಯನ ಹೆಂಡತಿ ಹೆಸರು ಈರಮ್ಮ. ಆಕೆಗೆ ಈರಿ ಎಂತಲೂ ಸಹ ಕರೆಯುತ್ತಿದ್ದರು ಎಂದರೆ ಸರಿ. ಈರಿ ಮತ್ತು ಹೆಳವಯ್ಯನ ಮಕ್ಕಳುಗಳು ಬಸವಯ್ಯ ಮತ್ತು ರಾಮಯ್ಯ ಎಂದರೆ ಸರಿ. ದಾವ ಸ್ವತ್ತುಗಳೆಲ್ಲ ಮೂಲತಃ ಈರಿ ಮತ್ತು ಹೆಳವಯ್ಯನಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ಈರಿ ಮತ್ತು ಹೆಳವ ತೀರಿಕೊಂಡ ನಂತರ ಅವರ ವಾರಸ್ಸುದಾರರಾದ ಬಸವಯ್ಯನ ಮತ್ತು ರಾಮಯ್ಯನ ಮಕ್ಕಳು ದಾವ ಸ್ವತ್ತನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಭಾಗಾಂಶದ ಹಕ್ಕು ಇಲ್ಲ ಈರಿ ಮತ್ತು ಹೆಳವನ ವಾರಸ್ಸುದಾರರಿಗೆ ಮಾತ್ರ ಹಕ್ಕು ಇರುವುದು ಎಂದರೆ ಸರಿಯಲ್ಲ

ಮರುವಿಚಾರಣೆಃ ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.